# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 160ರಲ್ಲಿ ದಿನಾಂಕ: 05.02.2022 ರಂದು, ನಡೆದ ವಾರ್ಡ್ DETER ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 05.02.2022 ರಂದು ವಾರ್ಡ್ ಸಂಖ್ಯೆ 160ರ ಫೆಬ್ರವರಿ ಮಾಹೆಯ ಮೊದಲನೇ **ವಾರ್ಡ್ DETER** ಸಮಿತಿ ಸಭೆ ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಭಾಗವಹಿಸಿದ್ದರು. ಸಭಾಧ್ಯಕ್ಷರಾದ ನೋಡಲ್ ಅಧಿಕಾರಿಗಳು ಬೇರೆಡೆಗೆ ವರ್ಗಗೊಂಡಿದ್ದು, ನೂತನ ನೋಡಲ್ ಅಧಿಕಾರಿಗಳ ನಿಯೋಜನೆಯಾಗದೇ ಇರುವುದರಿಂದ ಅವರ ಅನುಪಸ್ಥಿತಿಯಲ್ಲಿ ಸಭೆ ನಡೆಯಿತು.

### ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಗಟ್ಟಿಗೆರೆ ಬಡಾವಣೆಯ ಚಂದ್ರಶೇಖರ್ ರಸ್ತೆಯಲ್ಲಿ ರಸ್ತೆ ಬದಿಯ ಚರಂಡಿ ಹಾಗೂ ಕಲ್ವರ್ಟ್ ಗಳಲ್ಲಿ ತುಂಬಿರುವ ಹೂಳು ತರವುಗೊಳಿಸಲು ಅಲ್ಲಿನ ಸಾರ್ವಜನಿಕರು ಕೋರಿದರು.
- ಐಡಿಯಲ್ ಹೋಮ್ಸ್ ಬಡಾವಣೆಯ ನಿವಾಸಿಯಾದ ಶ್ರೀಮತಿ ಸಾಧನಾರವರು ತಮ್ಮ ಮನೆಯ ಸುತ್ತಮುತ್ತಲ ರಸ್ತೆಗಳ ಖಾಲಿ ನಿವೇಶನಗಳಲ್ಲಿ ಕಸ ಸುರಿಯುತ್ತಿದ್ದು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿದರು. ಹಾಗೂ ವಾರ್ಡ್ ಸಮಿತಿ ಸಭೆಗೆ ಎಲ್ಲಾ ವಿಭಾಗದ ಅಧಿಕಾರಿಗಳು ಹಾಜರಾಗದೇ ಇರುವುದರಿಂದ ಸಭೆಯಲ್ಲಿ ದಾಖಲಾಗುವ ದೂರುಗಳು ಪರಿಹಾರವಾಗುತ್ತಿಲ್ಲವೆಂದು ಆರೋಪಿಸಿ ಮುಂದಿನ ಸಭೆಗೆ ಎಲ್ಲಾ ವಿಭಾಗದ ಅಧಿಕಾರಿಗಳು ಹಾಜರಾಗಲು ಕೋರುವಂತೆ ಹಾಗೂ ಹಾಜರಾಗದ ಅಧಿಕಾರಿಗಳ ವಿರುದ್ಧ ಮೇಲಧಿಕಾರಿಗಳಿಗೆ ದೂರು ನೀಡುವಂತೆ ಸದಸ್ಯ ಕಾರ್ಯದರ್ಶಿಗಳಿಗೆ ಕೋರಿದರು.
- ವಾರ್ಡ್ ಸಮಿತಿ ಸದಸ್ಯರಾದ ಶ್ರೀಮತಿ ಸವಿತಾರವರು ವಾರ್ಡ್ ವ್ಯಾಪ್ತಿಯಲ್ಲಿ ಯಾವ ಯಾವ ಕಟ್ಟಡದ ನಿವಾಸಿಗಳು ಕಸ ನೀಡುತ್ತಿಲ್ಲವೆಂದು ಪಟ್ಟಿ ಮಾಡಿ ಸದರಿಯವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಕಳೆದ ಸಭೆಯಲ್ಲಿಯೇ ತಿಳಿಸಲಾಗಿದ್ದರೂ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ತಿಳಿಸಿದರು.
- ಮರದ ಎಲೆಗಳನ್ನು ವಿಲೇವಾರಿಗೊಳಿಸಲು ಈಗಾಗಲೇ 09 ಕಡೆ Mesh type ಲೀವ್ ಕಾಂಪೋಸ್ಟರ್ಗಳನ್ನು ಅಳವಡಿಸಿದ್ದು, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಲೀವ್ ಕಾಂಪೋಸ್ಟರ್ ಗಳನ್ನು ಅಳವಡಿಸಲು ಕೋರಿದರು.
- ಬೇಸಿಗೆ ಆರಂಭಕ್ಕೂ ಮುನ್ನವೇ ನೀರಿನ ಸಮಸ್ಯೆ ತಲೆದೋರಿದ್ದು, ಬೋರ್ವೆಲ್ಗಳನ್ನು ರಿಪೇರಿ ಮಾಡಿಸಲು ವಾರ್ಡ್ ಸಮಿತಿ ಸದಸ್ಯರು ಕೋರಿದರು.

- ಪಾಲಿಕೆ ಆಯವ್ಯಯದಲ್ಲಿ ವಾರ್ಡ್ ಸಮಿತಿ ಸಭೆಯ ಮೂಲಕ ಅನುಮೋದನೆ ಪಡೆದು ಕೈಗೆತ್ತಿಕೊಳ್ಳಲು ಸೂಚಿಸಿರುವ ಕಾಮಗಾರಿಗಳ ಅನುದಾನ ಬಳಸಿಕೊಂಡು ಫುಟುಪಾತ್ ಸ್ವಚ್ಛಗೊಳಿಸುವ ಹಾಗೂ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು ನಿರ್ವಹಿಸಲು ಕೋರಿದರು.
- ಚರ್ಚ್ ಹಿಂಭಾಗ ನವಮಿ ಅಪಾರ್ಟ್‌ಮೆಂಟ್ ಹತ್ತಿರ ಕಸವನ್ನು ಪಾಲಿಕೆಯ ಗಾಡಿಗಳಿಗೆ ನೀಡದೇ ಖಾಲಿ ನಿವೇಶನಗಳಿಗೆ ಸುರಿಯುತ್ತಿದ್ದು ಸದರಿಯವರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿದರು.
- ಕಾಫಿ ಕಟ್ಟೆ ಸುತ್ತಮುತ್ತಲ ಪ್ರದೇಶದಲ್ಲಿ ಚರಂಡಿ ಅಭಿವೃದ್ಧಿಪಡಿಸಿದ ನಂತರ ಡೆಬ್ರಿಸ್ ತೆರವುಗೊಳಿಸಿರುವುದಿಲ್ಲವೆಂದು ಅಲ್ಲಿನ ನಿವಾಸಿಗಳು ದೂರು ನೀಡಿ ಡೆಬ್ರಿಸ್ ತೆರವುಗೊಳಿಸುವಂತೆ ಮನವಿ ಮಾಡಿದರು.
- ಸಪ್ತಗಿರಿ ಬಡಾವಣೆಯಲ್ಲಿ ಫುಟ್ ಪಾತ್ ಸ್ವಚ್ಛಗೊಳಿಸಲು ಮಹಿಳಾ ಪೌರ ಕಾರ್ಮಿಕರನ್ನು ಕಳುಹಿಸುತ್ತಿದ್ದು, ಇನ್ನೂ ಹೆಚ್ಚಿನ ಪುರುಷ ಪೌರ ಕಾರ್ಮಿಕರನ್ನು ಒದಗಿಸಿದಲ್ಲಿ ವೇಗವಾಗಿ ಸ್ವಚ್ಛತಾ ಕಾರ್ಯ ಮುಗಿಯುವುದೆಂದು ಅಲ್ಲಿನ ನಿವಾಸಿಯಾದ ಶ್ರೀಮತಿ ಪ್ರತಿಮಾ ರವರು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ಪೌರ ಕಾರ್ಮಿಕರ ಕೊರತೆಯಿದ್ದು ಹೆಚ್ಚಿನ ಪೌರ ಕಾರ್ಮಿಕರನ್ನು ಒದಗಿಸಲು ಈಗಾಗಲೇ ಮೇಲಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು, ಅನುಮೋದನೆ ದೊರೆತ ನಂತರ ಕ್ರಮ ವಹಿಸಲಾಗುವುದೆಂದು ತಿಳಿಸಿದರು.
- ಸಪ್ತಗಿರಿ ಬಡಾವಣೆಯಲ್ಲಿ ಬ್ಲಾಕ್ ಸ್ಪಾಟ್ ತೆರವುಗೊಳಿಸುತ್ತಿದ್ದರೂ ಕಸ ಸುರಿಯುತ್ತಿರುವುದರಿಂದ ಮತ್ತೆ ಮತ್ತೆ ಬ್ಲಾಕ್ ಸ್ಪಾಟ್ ಉಂಟಾಗುತ್ತಿದ್ದು ಈ ಬಗ್ಗೆ ಮಾರ್ಷಲ್ ಗಳು ಅಗತ್ಯ ಕ್ರಮ ವಹಿಸಲು ಕೋರಿದರು.
- ಭೀಮನಕಟ್ಟೆ ಬಳಿ ಡೆಬ್ರಿಸ್ ತೆರವುಗೊಳಿಸಲು ಅಲ್ಲಿನ ನಿವಾಸಿಗಳು ಕೋರಿದರು.
- ಹಾಪ್ ಕಾಮ್ಸ್ ಹಿಂಭಾಗದಲ್ಲಿರುವ ಅಂಬೇಡ್ಕರ್ ಪಾರ್ಕ್ ನಲ್ಲಿ ಗಿಡಗಳಿಗೆ ಹುಳುಗಳು ಬಿದ್ದಿದ್ದು ಔಷಧಿ ಸಿಂಪಡಿಸಲು ಕೋರಿದರು.
- ವಾಸವಿ ಫುಡ್ಸ್ ವತಿಯಿಂದ ರಂಗಮಂದಿರ ಪಕ್ಕದ ರಸ್ತೆಯಲ್ಲಿ ಅವರೆಕಾಳು ಮೇಳ ಆಯೋಜಿಸಿದ್ದು ಇದರಿಂದ ರಸ್ತೆ ಬ್ಲಾಕ್ ಆಗಿ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು ಪರಿಶೀಲಿಸಿ ಅನುಮತಿ ಪಡೆಯದೇ ಆಯೋಜಿಸಿದ್ದಲ್ಲಿ ಶೀಘ್ರವೇ ತೆರವುಗೊಳಿಸಲು ಸಾರ್ವಜನಿಕರು ಕೋರಿದರು.
- ವಾರ್ಡ್ ವ್ಯಾಪ್ತಿಯ ಹಲವು ಕಡೆ ಪ್ಲೆಕ್ಸ್ ಅಳವಡಿಸಿದ್ದು, ಶೀಘ್ರವೇ ತೆರವುಗೊಳಿಸಲು ಕೋರಿದರು.
- LG ಗೋಡನ್ ರಸ್ತೆಯಲ್ಲಿ ಬ್ಲಾಕ್ ಸ್ಪಾಟ್ ತೆರವುಗೊಳಿಸಲು ಅಲ್ಲಿನ ನಿವಾಸಿಗಳು ಕೋರಿದರು.
- ವಾರ್ಡ್ ವ್ಯಾಪ್ತಿಯಲ್ಲಿರುವ ಶೇ.50ಕ್ಕೂ ಹೆಚ್ಚು ಕಡೆ ಸ್ವಿಚ್ ಬಾಕ್ಸ್ ಇರುವುದಿಲ್ಲವೆಂದು ಸಾರ್ವಜನಿಕರು ದೂರು ನೀಡಿ ತುರ್ತಾಗಿ ಅಳವಡಿಸಲು ಕೋರಿದರು.
- E-Vehicles ಬಳಕೆದಾರರು ವಸತಿ ಉದ್ದೇಶಕ್ಕೆ ವಿದ್ಯುತ್ ಸಂಪರ್ಕ ಪಡೆದು ತಮ್ಮ ವಾಹನಗಳನ್ನು ಚಾರ್ಜ್ ಮಾಡುತ್ತಿರುವುದರಿಂದ ಏನಾದರೂ ಅನಾಹುತ ಜರುಗುವ ಸಂಭವವಿದ್ದು ಈ ಬಗ್ಗೆ ಕ್ರಮ ವಹಿಸಬೇಕೆಂದು ಶ್ರೀನಾಥ್ ಬಾಬುರವರು ಕಿರಿಯ ಅಭಿಯಂತರರು ಬೆಸ್ಕಾಂ ರವರಿಗೆ ಕೋರಿದರು.

- ಪಾದಚಾರಿ ಮಾರ್ಗದಲ್ಲಿ ಅಳವಡಿಸಿರುವ ಟ್ರಾನ್ಸ್ ಫಾರ್ಮರ್‌ಗಳು ಪಾದಚಾರಿಗಳ ತಲೆಗೆ ತಗಲುವ ಸಂಭವವಿದ್ದು ಬೇರೆಡೆಗೆ ವರ್ಗಾಯಿಸಲು ಸಾರ್ವಜನಿಕರು ಕೋರಿದರು.
- ಶ್ರೀನಿವಾಸಪುರ ಕ್ರಾಸ್ ಬಳಿ ಪಾದಾಚಾರಿ ಮಾರ್ಗದ ಮೇಲೆ ಟ್ರಾನ್ಸ್ ಫಾರ್ಮರ್‌ಗಳನ್ನು ಅಳವಡಿಸಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿದ್ದು ಬೇರೆಡೆಗೆ ಸ್ಥಳಾಂತರಿಸಲು ಆ ಭಾಗದ ಸಾರ್ವಜನಿಕರು ಕೋರಿದರು.
- ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡು ತಳ್ಳುವ ಗಾಡಿ ಹಾಕಿಕೊಂಡಿದ್ದು, ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗದಂತೆ ಕ್ರಮ ವಹಿಸಲು ಸಾರ್ವಜನಿಕರು ಕೋರಿದರು.
- ಪ್ರಮೋದ್ ಬಡಾವಣೆಯಲ್ಲಿ ಸ್ವಿಚ್ ಬೋರ್ಡ್ ಗಳು ಹಾಳಾಗಿದ್ದು, ತುರ್ತಾಗಿ ದುರಸ್ಥಿಪಡಿಸುವಂತೆ ಹಾಗೂ ರಸ್ತೆ ಬದಿ ಗುಡಿಸಲು ಕ್ರಮ ವಹಿಸುವಂತೆ ಅಲ್ಲಿನ ನಿವಾಸಿಯಾದ ಶ್ರೀ ತಿಲಕ್ ರವರು ಕೋರಿದರು.

ಸಹಿ/-

ಸದಸ್ಯ ಕಾರ್ಯದರ್ಶಿಗಳು ವಾರ್ಡ್ DETER ಸಮಿತಿ
ವಾರ್ಡ್ ಸಂಖ್ಯೆ-160

***ಪ್ರತಿಯನ್ನು:-***

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.